

ಹುಬ್ಬಳ್ಳಿಯ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಪ್ರಜಾವಾಣಿ ಹಾಗೂ ಡೆಕ್ಕನ್ ಹೆರಾಲ್ಡ್ ವತಿಯಿಂದ ಮಂಗಳವಾರ ಫ್ರೀಡಂ ಆಯಿಲ್ ಪ್ರಸ್ತುತಿ ಕರುನಾಡ ಸವಿಯೂಟ ಆವೃತ್ತಿ 3 ಕಾರ್ಯಕ್ರಮ ನಡೆಯಿತು - ಪ್ರಜಾವಾಣಿ ಚಿತ್ರ



ಮಂಗಳೂರಿನಲ್ಲಿ ನಡೆದ 'ಕರುನಾಡ ಸವಿಯೂಟ' ಸ್ಪರ್ಧೆ – ಪ್ರಜಾವಾಣಿ ಚಿತ್ರ

ಮತ್ತು ಪ್ರೀತಿ ಆಹಾರವನ್ನು ರುಚಿಕರವಾಗಿಸುತ್ತದೆ. ಪಾಕವಿಧಾನದ ಶೈಲಿ ಮತ್ತು ಅವರ ಕೈಚಳಕ ಅದನ್ನು ಅನನ್ಯಗೊಳಿಸುತ್ತದೆ' ಎಂದರು.

ಮತ್ತೊಬ್ಬ ತೀರ್ಪುಗಾರ್ತಿ ಹಾಗೂ ನಟಿ ಅದ್ವಿತಾ ಶೆಟ್ಟಿ ತುಳು ಭಾಷೆಯಲ್ಲಿ ಮಾತನಾಡಿ, ಸಭಿಕರ ಮನಸೂರೆಗೊಂಡರು. ಅವರು ತಮ್ಮ ಮಂಗಳೂರಿನ ಸಂಪರ್ಕ ಮತ್ತು ಕರಾವಳಿ ಪಾಕಪದ್ಧತಿಯ ನೆನಪುಗಳನ್ನು ಹಂಚಿಕೊಂಡರು.

ಸ್ಪರ್ಧೆ ಆರಂಭಕ್ಕೂ ಮುನ್ನ ತೀರ್ಪುಗಾರರು 'ಅವಲಕ್ಕಿ ಒಗ್ಗರಣೆ' ಸಿದ್ಧಪಡಿಸಿ ಅಡುಗೆ ಸಲಹೆಗಳನ್ನು ಹಂಚಿಕೊಂಡಿದ್ದು ವಿಶೇಷವಾಗಿತ್ತು. ನಂತರ ಮುರಳಿ ಹಾಗೂ ಸುಚಿತ್ರಾ ಮುರಳಿ ಸ್ಪರ್ಧಾಳುಗಳು ತಯಾರಿಸಿದ ಖಾದ್ಯಗಳನ್ನು ಸವಿಯುವ ಮೂಲಕ ತೀರ್ಪು ನೀಡಿದರು.

ವಿಜೇತರು:

1. ಪ್ರಿಯಾ ನಾಯಕ್ – ಸೀಗಡಿ ಪುಲಿಮುಂಚಿ
2. ಪ್ರವೀಣ್ – ರಬ್ಡಿ ಗುಲಾಬ್ ಜಾಮೂನ್
3. ವಿನ್ಯಾಸ್ – ಚಿಕನ್ ಗ್ರೀನ್ ಗೀ ರೋಸ್ಟ್

## ಮೈಸೂರು

ಮೈಸೂರಿನ ವಿನೋಭಾ ರಸ್ತೆಯಲ್ಲಿರುವ ನಂಜರಾಜ ಬಹದ್ದೂರ್ ಸಮುದಾಯ ಭವನ ಭರಪೂರ ಚಟುವಟಿಕೆಗಳಿಂದ ಕೂಡಿತ್ತು. 'ಫ್ರೀಡಂ ಅಡುಗೆ ಎಣ್ಣೆ' ಪ್ರಸ್ತುತಪಡಿಸಿ, ಆಯೋಜಿಸಿದ್ದ 'ಕರುನಾಡ ಸವಿಯೂಟ' ಪಾಕವಿಧಾನಗಳ ಸ್ಪರ್ಧಾ ಕಾರ್ಯಕ್ರಮ ಅದಾಗಿತ್ತು. ಸ್ಪರ್ಧೆಯಲ್ಲಿ ನೂರಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು. ನಟ ಮತ್ತು ಆಹಾರ ವಿಮರ್ಶಕ ಸಿಹಿ ಕಹಿ ಚಂದ್ರು ಹಾಗೂ ಪ್ರಸಿದ್ಧ ಬಾಣಸಿಗ ಆದರ್ಶ್ ತತ್ಪತಿ ತೀರ್ಪುಗಾರರಾಗಿದ್ದದ್ದು, ಸ್ಪರ್ಧಾ ಕಾರ್ಯಕ್ರಮಕ್ಕೆ ವಿಶೇಷ ಕಳೆಗಟ್ಟಿತ್ತು. ಅಲ್ಲದೆ, ಸ್ಪರ್ಧೆಗೆ ಅಗಾಧ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಕಂಡುಬಂದಿತ್ತು. 18 ವರ್ಷದ ಯುವತಿಯರಿಂದ 81ರ ಇಳಿ ವಯಸ್ಸಿನವರು ಭಾಗವಹಿಸಿದ್ದರು. ಗೃಹಿಣಿಯರು, ಉದ್ಯೋಗಸ್ಥ ಮಹಿಳೆಯರು ಹಾಗೂ ಪುರುಷರು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಪಾಕಪದ್ಧತಿಗಳಲ್ಲಿ ಸಾಂಪ್ರದಾಯಿಕ ಆಹಾರ ಪದಾರ್ಥಗಳು, ಸಸ್ಯಾಹಾರಿ, ಮಾಂಸಾಹಾರ, ಸಿರಿಧಾನ್ಯಗಳಿಂದ ಮಾಡಿದ ಭಕ್ಷ್ಯಗಳು ಸೇರಿದಂತೆ ಎಲ್ಲವೂ ವಿಶಿಷ್ಟವಾಗಿದ್ದವು.

ಕೃಷ್ಣಮೂರ್ತಿಪುರಂನ 81 ವರ್ಷದ ನಳಿನಿ ಶ್ರೀಕಾಂತ್ ಅವರು ಬೇಸನ್ ಬಾದಾಮ್ ಹಲ್ವಾ ತಯಾರಿಸಿದರೆ, 75ರ ಹರೆಯದ ಯದುಗಿರಿ ಅವರಿಂದ ಸ್ಟ್ರಾಬೆರಿ ಮತ್ತು ಮಿಲ್ಕ್ ಕೋವಾ ತುಂಬಿದ ಒಬ್ಬಟ್ಟು ಮೂಡಿಬಂದಿದ್ದು ವಿಶೇಷವಾಗಿತ್ತು.

ವಿಜೇತರು:

ಪ್ರಥಮ: ಧೃತಿ – ವಿಶಿಷ್ಟ ರೀತಿ ಪದಾರ್ಥಗಳನ್ನು ತುಂಬಿದ ಕರ್ಜಿಕಾಯಿ

ದ್ವಿತೀಯ: ಬಿ. ಭಾಗ್ಯಲಕ್ಷ್ಮಿ – ಮಾಕ್ ಮೀಟ್ ಕರಿ (ಮಾಂಸದಂತೆ ಕಾಣುವ)

ತೃತೀಯ: ಜಾನ್ವಿ ಮಹೇಶ್ – ಸೋಜಿ ಸೋಜಿಗ, ರವೆಯಿಂದ ಮಾಡಿದ ಕಪ್‌ಕೇಕ್

ವಿಡಿಯೊಗಳನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


